ಶ್ರೀ ಚಂದ್ರಶೇಖರ ಪಾವಂಜಿ —ಮಾನ್ಯ ಅಧ್ಯಕ್ಷರೇ, ನನ್ನ ಪ್ರಶ್ನೆಗೆ ಉತ್ತರವಾಗಿ ಪ್ರತಿ ವರ್ಷವೂ ಅವಶ್ಯವಿದ್ದ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಲಾಗುತ್ತಿದೆ ಎಂದು ಹೇಳಿದ್ದಾರೆ. ಈ ರೀತಿ ದುರಸ್ತಿ ಕಾರ್ಯವನ್ನು ಸರಿಯಾಗಿ ಮಾಡದ ಕಾರಣದಿಂದ ಕೆಲವು ಜನರ ಜಮೀನುಗಳಿಗೆ ನೀರು ಸರಿಯಾಗಿ ಮುಟ್ಟದೆ ಅವರ ಬೆಳೆಗಳು ನಷ್ಟವಾದ ಬಗ್ಗೆ ಸಾಕಷ್ಟು ಉದಾಹರಣೆಗಳು ಇವೆ. ಆದ್ದರಿಂದ ಬೆಳೆಗಳು ನಷ್ಟವಾಗದಂತೆ ಏನಾದರು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಎಚ್. ಡಿ ದೇವೇಗೌಡ.—ದುರಸ್ತಿಕಾರ್ಯ ಸರಿಯಾಗಿ ಆಗುತ್ತಿಲ್ಲ ಎನ್ನುವುದಕ್ಕೆ ಬದಲು ಮಾನ್ಯ ಸದಸ್ಯರು ಇರತಕ್ಕಂಥ ವಾಸ್ತವಾಂಶವನ್ನು ಸರಿಯಾಗಿ ಅರ್ಥವಾಡಿಕೊಳ್ಳಬೇಕು. ಒಂದು ಕೆನಾಲ್‌ನಿಂದ ಬೆಳೆಯತಕ್ಕಂಥ ಬೆಳೆಗೆ ಅನುಗುಣವಾಗಿ ನೀರನ್ನು ಬಿಡಲಾಗುತ್ತದೆ ಒಂದುವೇಳೆ ೫ ಕ್ಯೂಸೆಕ್ಸ್ ನೀರನ್ನು ಬಿಡುವುದಕ್ಕೆ ಬದಲು ೭ ಕ್ಯೂಸೆಕ್ಸ್ ನೀರನ್ನು ಬಿಟ್ಟರೆ ಹರಿಯುವಂತಹ ನೀರಿನ ಪ್ರಮಾಣ ಜಾಸ್ತಿಯಾಗಿ ಕೆನಾಲ್ ಕಿತ್ತುಕೊಂಡು ಹೋಗುತ್ತದೆ. ಆದ್ದರಿಂದ ಕೆನಾಲ್ ಸಿಸ್ಟಮ್ ಏನಿದೆ, ಅದಕ್ಕಿಂತ ಹೆಚ್ಚು ನೀರನ್ನು ತೆಗೆದುಕೊಂಡು ಹೋಗುವುದು ಕಷ್ಟವಾಗುತ್ತದೆ. ಈಗ ಅವಶ್ಯಕತೆ ಇದ್ದ ಕಡೆ ದುರಸ್ತಿ ಕಾರ್ಯಗಳನ್ನು ಕೈಕೊಳ್ಳುವಬಗ್ಗೆ ನಾವು ಹಿಂದೆ ಬೀಳುವುದಿಲ್ಲ ಎಂದು ತಮ್ಮ ಮೂಲಕ ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ. ಎಚ್. ಪಾಟೀಲ್.— ಈಗ ಕಾಲುವೆಗಳ ಮೂಲಕ ನೀರು ಸರಬರಾಜು ಮಾಡುವ ವಿಧಾನದಲ್ಲಿ ಕೆಲವರಿಗೆ ಹೆಚ್ಚು ನೀರು ಸಿಗುತ್ತಿದೆ ಮತ್ತೆ ಕೆಲವರಿಗೆ ಸರಿಯಾಗಿ ನೀರು ಸಿಗುತ್ತಿಲ್ಲ. ಆದ್ದರಿಂದ ಈ ಬಗ್ಗೆ ತಾವು ಮತ್ತು ವ್ಯವಸಾಯ ಮಂತ್ರಿಗಳು ಸೇರಿಕೊಂಡು ಏನಾದರೂ ಒಂದು ವ್ಯವಸ್ಥೆ ಮಾಡಬೇಕು. ಈ ರೀತಿ ಮಾಡಿದಾಗ ಮಾತ್ರ ಸರ್ಕಾರದವರು ಕಾಲುವೆಗಾಗಿ ಖರ್ಚು ಮಾಡಿದ ಹಣ ಸದ್ವಿನಿಯೋಗವಾಗುತ್ತದೆ. ಅಷ್ಟೇ ಅಲ್ಲ, ಎಲ್ಲ ರೈತರೂ ಸಹ ಯೋಗ್ಯವಾದಂಥ ಬೆಳೆಯನ್ನು ಬೆಳೆಯಲು ಅನುಕೂಲವಾಗುತ್ತದೆ. ಆದ್ದರಿಂದ ಈ ವಿಷಯವನ್ನು ಯೋಚನೆ ಮಾಡುತ್ತೀರಾ?

ಶ್ರೀ ಎಚ್. ಡಿ. ದೇವೇಗೌಡ.—ಬಹಳ ಪ್ರಾಮುಖ್ಯವಾದ ವಿಷಯವನ್ನು ಮಾನ್ಯ ಕೆ. ಎಚ್. ಪಾಟೀಲ್ ಅವರು ಉಪಪ್ರಶ್ನೆಯ ಮೂಲಕ ಎತ್ತಿದ್ದಾರೆ. ಈ ದೇಶದಲ್ಲಿ ನೀರಿನ ಬಳಕೆ ಬಗ್ಗೆ ಇರತಕ್ಕಂಥ ಪದ್ಧತಿ ಏನಿದೆ, ಅದನ್ನು ಹಲವಾರು ರೀತಿಯಿಂದ ಮಾರ್ಪಾಡು ಮಾಡಬೇಕಾಗಿದೆ. ಈ ದಿಕ್ಕಿನಲ್ಲಿ ಮಾನ್ಯ ಸದಸ್ಯರ ಸಹಕಾರವೂ ಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಒಂದು ಕೆನಾಲ್‌ನಲ್ಲಿ ಎಷ್ಟು ನೀರು ಹರಿಯುತ್ತದೆ ಎಂಬುದನ್ನು ನೋಡಿಕೊಂಡು, ಅದರ ಆಧಾರದ ಮೇಲೆ ಕ್ರಾಪಿಂಗ್ ಪ್ಯಾಟರನ್ ಜಾರಿಗೆ ತರಬೇಕಾಗಿರುತ್ತದೆ. ಇಲ್ಲದಿದ್ದರೆ ಎಲ್ಲರಿಗೂ ನೀರು ಸಿಗುವುದಿಲ್ಲ.

ಶ್ರೀ ಚಂದ್ರಶೇಖರ ಪಾವಂಜಿ.—ಎಲ್ಲರಿಗೂ ನೀರು ಸಿಗಬೇಕಾದರೆ ಕ್ರಾಪಿಂಗ್ ಪ್ಯಾಟರನ್ ಜಾರಿಗೆ ತರುವುದು ಅನಿವಾರ್ಯ ಎಂದು ಮಾನ್ಯ ಮಂತ್ರಿಗಳು ಹೇಳಿದರು. ಆದ್ದರಿಂದ ಇದನ್ನು ಯಾವಾಗ ಜಾರಿಗೆ ತರುತ್ತೀರಿ ಎಂಬ ಬಗ್ಗೆ ತಾವು ನಿರ್ದಿಷ್ಟವಾದ ದಿನಾಂಕವನ್ನು ಹೇಳಬೇಕಂ.

ಶ್ರೀ ಎಚ್. ಡಿ. ದೇವೇಗೌಡ.—ಕ್ರಾಪಿಂಗ್ ಪ್ಯಾಟರನ್ ಎನ್-ಫೋರ್ಸ್ ಮಾಡುವುದು ಅನಿವಾರ್ಯವಾಗಿದೆ. ಈ ನಮ್ಮ ಸಮಾಜದಲ್ಲಿ ಎಲ್ಲರಿಗೂ ಜಲಸಂಪತ್ತು ಮತ್ತು ಪ್ರಕೃತಿ ಸಂಪತ್ತು ಸರಿಯಾಗಿ ಹಂಚಿಕೆಯಾಗಬೇಕಾದರೆ ನಾವು ಕ್ರಾಪಿಂಗ್ ಪ್ಯಾಟರನ್ ಅನ್ನು ಇನ್‌ಸಿಸ್ಟ್ ಮಾಡಲೇ ಬೇಕಾಗುತ್ತದೆ. ಈ ದಿಕ್ಕಿನಲ್ಲಿ ನಾವೆಲ್ಲರೂ ಸೇರಿಕೊಂಡು ಕ್ರಮ ಕೈಕೊಳ್ಳಬೇಕಾಗುತ್ತದೆ.

ಪದವೀಧರ ಇಂಜಿನೀಯರುಗಳು ಹಾಗೂ ಜ್ಯೂನಿಯರ್ ಇಂಜನೀಯರ್‌ಗಳ ವೇತನ ಶ್ರೇಣಿ

೧೦೯. ಶ್ರೀ ಆರ್. ವೆಂಕಟರಾಮ್ಯಯ್ಯ (ಮುಳಬಾಗಿಲು) —ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ ?

ಅ) ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯಲ್ಲಿನ ಪದವೀಧರ ಇಂಜಿನಿಯರ್‌ಗಳ ಮತ್ತು ಜ್ಯೂನಿಯರ್ ಇಂಜಿನೀಯರುಗಳ ಸಂಖ್ಯೆ ಎಷ್ಟು?

ಇ) ಪದವೀಧರ ಮತ್ತು ಡಿಪ್ಲೋಮೋ ಇಂಜಿನೀಯರುಗಳಿಗೆ ಸಮಾನ ಬಾಧ್ಯತೆ ಇದೆಯೆ? ಹಾಗಿದ್ದಲ್ಲಿ ಈ ಎರಡೂ ದರ್ಜೆಗಳ ಅಧಿಕಾರಿಗಳಿಗಿರುವ ವೇತನ ಅಂತರ ಎಷ್ಟು ?

ಈ) ಸಮಾನ ಕೆಲಸಕ್ಕೆ ಸಮಾನ ವೇತನ ಶ್ರೇಣಿಯನ್ನು ಸರ್ಕಾರದವರು ಹೆಚ್ಚಿಸುವರೆ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ೧. ಪದವೀಧರ ಇಂಜಿನೀಯರ್‌ಗಳು ೪೪೯೦

೨. ಜೂನ್ಯಿಯರ್ ಇಂಜಿನೀಯರ್‌ಗಳು ೪೦೫೦

ಆ) ಸಮಾನ ಬಾಧ್ಯತೆ ಇಲ್ಲ.

೧. ಪದವೀಧರ ಇಂಜಿನೀಯರ್‌ಗಳ ವೇತನ ಶ್ರೇಣಿ

ರೂ. ೧೦೫೦–೫೦–೧೨೦೦–೬೦–೧೫೦೦–೭೫–೧೯೫೦

೨. ಜೂನಿಯರ್ ಇಂಜಿನೀಯರ್‌ಗಳ ವೇತನ ಶ್ರೇಣಿ

ರೂ. ೭೫೦–೨೫–೮೦೦–೩೦–೯೫೦–೩೦–೧೨೦೦–೬೦–೧೫೦೦

ಇ) ವೇತನ ಶ್ರೇಣಿಯನ್ನು ಅತಿ ಮುಖ್ಯವಾಗಿ ವಿದ್ಯಾರ್ಹತೆಯ ಮೇರೆಗೆ ಮಂಜೂರು ಮಾಡಲಾಗುತ್ತದೆ.

ಶ್ರೀ ಆರ್. ವೆಂಕಟರಾಮಯ್ಯ.—ಈ ವಿಚಾರ ಮಾನ್ಯ ದೇವೇಗೌಡರಿಗೆ ಬಹಳ ಚೆನ್ನಾಗಿ ಗೊತ್ತಿದೆ. ಸಮಾನ ಕೆಲಸಕ್ಕೆ ಸಮಾನ ಸಂಬಳ ಕೊಡಬೇಕು ಎಂದು ಸುಪ್ರೀಂ ಕೋರ್ಟಿನ ರೂಲಿಂಗ್ ಸಹ ಇದೆ. ಆದರೂ ಸಹ ಇಲ್ಲಿ ಸಮಾನ ಕೆಲಸ ಮಾಡುತ್ತಿರುವ ಪದವೀಧರ ಇಂಜಿನೀಯರ್‌ಗಳ ವೇತನ ಶ್ರೇಣಿಗೂ ಮತ್ತು ಜೂನಿಯರ್ ಇಂಜಿನಿಯರ್‌ಗಳ ವೇತನ ಶ್ರೇಣಿಗೂ ವ್ಯತ್ಯಾಸವಿರಲು ಕಾರಣವೇನು? ಇವರುಗಳು ಕೆಲಸಕ್ಕೆ ಸೇರುವಾಗ ಸುಮಾರು ೩೦೦ ರೂಪಾಯಿಗಳ ವ್ಯತ್ಯಾಸವಿದ್ದರೆ, ನಿವೃತ್ತರಾಗುವಾಗ ೪೦೦ ರೂಪಾಯಿಗಳ ವ್ಯತ್ಯಾಸವಿದೆ. ವೇತನ ಶ್ರೇಣಿಯಲ್ಲಿ ಇಷ್ಟೊಂದು ವ್ಯತ್ಯಾಸವಿಡುವುದು ಸರಿಯೇ?

ಶ್ರೀ ಎಚ್. ಡಿ. ದೇವೇಗೌಡ.—ಸಮಾನ ವೇತನ ಮತ್ತು ಸಮಾನ ಕೆಲಸ ಏನಿದೆ...

ಶ್ರೀ ಎಂ. ಪಂಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಸದಸ್ಯರು ಸುಪ್ರೀಂ ಕೋರ್ಟಿನ ರೂಲಿಂಗ್ ಬಗ್ಗೆ ಹೇಳಿದರು, ಆದರೆ ಇವರು ಯಾವ ಕೋರ್ಟಿನ ತೀರ್ಪನ್ನು ಸಹ ಒಪ್ಪುತ್ತಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈಗ ಹೈಕೋರ್ಟಿನಲ್ಲಿ ಕೆಲಸ ಮಾಡುತ್ತಿರುವ ನ್ಯಾಯಾಧೀಶರ ವೇತನಕ್ಕೂ ಮತ್ತು ಸುಪ್ರೀಂಕೋರ್ಟಿನಲ್ಲಿ ಕೆಲಸ ಮಾಡುತ್ತಿರುವ ನ್ಯಾಯಾಧೀಶರ ವೇತನಕ್ಕೂ ವ್ಯತ್ಯಾಸವಿದೆ ಎಂಬುದನ್ನು ತಾವು ಒಪ್ಪಿಕೊಳ್ಳುತ್ತೀರಿ. ಇದನ್ನು ನಾನು ಟೀಕೆ ಮಾಡುವುದಕ್ಕಾಗಿ ಹೇಳುತ್ತಿಲ್ಲ. ಎಲ್ಲರೂ ೮ ಗಂಟೆಗಳ ಕಾಲ ಕೆಲಸ ಮಾಡುತ್ತಾರೆ. ಆದರೆ ವೇತನದಲ್ಲಿ ವ್ಯತ್ಯಾಸ ಇದೆ. ಇದು ದೊಡ್ಡ ವಿಷಯ. ಆದ್ದರಿಂದ ಇದರ ಬಗ್ಗೆ ಇಲ್ಲಿ ಚರ್ಚೆ ಬೇಡ. ನಾನು ಈ ಬಗ್ಗೆ ಇಷ್ಟೇ ಹೇಳುತ್ತೇನೆ, ಸಮಾನ ಕೆಲಸ, ಸಮಾನ ವೇತನ ಎಂಬ ತತ್ವ ಏನಿದೆ, ಇದರ ಬಗ್ಗೆ ಇನ್ನೂ ಸ್ವಲ್ಪ ಆಳವಾಗಿ ಕಾನೂನು ತಜ್ಞರು, ಕಾನೂನು ಪಂಡಿತರು, ಆರ್ಥಿಕ ತಜ್ಞರು ತುಂಬಾ ಯೋಚನೆ ಮಾಡಬೇಕಾಗುತ್ತದೆ ಇದನ್ನು ಒಪ್ಪಿಕೊಂಡರೆ ಆಗುವಂತಹ ಪರಿಣಾಮದ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ. ಎರಡನೇ ವಿಷಯವೆಂದರೆ ಜೂನಿಯರ್ ಇಂಜಿನೀಯರ್‌ಗಳಿಗೆ, ಕಿರಿಯ ಸಹಾಯಕ ಇಂಜಿನೀಯರ್‌ಗಳಿಗೆ ಕೊಡುವ ವೇತನವನ್ನು ಕೊಡುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರವಾಗಿ ಇಂಟರ್‌ಮೀಡಿಯರಿ ಗ್ರೇಡ್‌ನಲ್ಲಿ ಒಂದು ಸ್ಥಾನವನ್ನು ಕಲ್ಪಿಸಿಕೊಡುವುದಕ್ಕಾಗಿ ಪ್ರಪೋಸಲ್ ಹುದ್ದೆಗಳನ್ನು ಮಾಡುತ್ತಿದ್ದೇವೆ. ಸುಮಾರು ೬ ನೂರು ಜನ ಜೂನಿಯರ್ ಇಂಜಿನೀಯರ್‌ಗಳಿಗೆ ಇದರ ಲಾಭವಾಗುತ್ತದೆ. This is the first time we have created such inter-mediary grade to facilitate these people to avail the benefits.

ಶ್ರೀ ಆರ್. ವೆಂಕಟರಾಮಯ್ಯ.—ನಾನು ಹೇಳುವುದೇನೆಂದರೆ, ಜೂನಿಯರ್ ಇಂಜಿನೀಯರ್‌ಗಳಿಗೆ ೭೫೦ ರೂಪಾಯಿ ಮತ್ತು ಸಹಾಯಕ ಇಂಜಿನೀಯರ್‌ಗಳಿಗೆ ೧೦೫೦ ಸ್ಕೇಲ್ ಇದೆ. ಈ ಸಂಬಳಗಳ ಅಂತರ ಹೆಚ್ಚು ಇರುವುದರಿಂದ ಅದನ್ನು ಕಡಿಮೆ ಮಾಡಬೇಕು. ನೀವು ಇಂಟರ್‌ಮೀಡಿಯೇರಿ ಗ್ರೇಡ್‌ನ್ನು ಕೊಡುವುದರ ಬಗ್ಗೆ ಹೇಳಿದ್ದೀರಿ, ಅದನ್ನು ನಾನು ಸ್ವಾಗತಿಸುತ್ತೇನೆ. ಆದರೆ ಈ ವೇತನದಲ್ಲಿರುವ ಹೆಚ್ಚಿನ ತಾರತಮ್ಯವನ್ನು ಕಡಿಮೆ ಮಾಡುವುದಕ್ಕೆ ಆಶ್ವಾಸನೆ ಕೊಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಹೆಚ್. ಡಿ. ದೇವೇಗೌಡ.—ಇದರ ಬಗ್ಗೆ ಪೇ ಕಮೀಷನ್‌ನ್ನು ಮಾಡಿದ್ದೇವೆ. ಯಾರು ಯಾರಿಗೆ ಸಂಬಳದ ಬಗ್ಗೆ ಅತೃಪ್ತಿ, ಅಸಮಾಧಾನ ಇದಯೋ ಅವರೆಲ್ಲರೂ ಪೇ ಕಮೀಷನ್ ಮುಂದೆ ಮಂಡನೆ ಮಾಡಿ ಪರಿಹಾರ ಮಾಡಿಕೊಳ್ಳಬಹುದು.

ಮೈಸೂರು ನಗರದ ಕರಕುಶಲ ಕಾರ್ಮಿಕರುಗಳಿಗೆ ಗಂಧದ ಮರ, ತೇಗದ ಮರ, ಬೀಟೆ ಮರ ಹಾಗೂ ದಂತಗಳ ಸರಬರಾಜು.

೬೦೭. ಶ್ರೀಮತಿ ಮುಕ್ತಾರ್ ಉನ್ನೀಸ (ಮೈಸೂರು).— ಮಾನ್ಯ ಅರಣ್ಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

೨) ಮೈಸೂರು ನಗರದಲ್ಲಿರುವ ಕರ ಕುಶಲದಾರರಿಗೆ ಪರ್ಮಿಟ್ಟಿನ ಮೇಲೆ ಶ್ರೀಗಂಧ, ಬೀಟೆ, ತೇಗ ಮತ್ತು ದಂತವನ್ನು ನೇರವಾಗಿ ಕೊಡಲು ವ್ಯವಸ್ಥೆ ಮಾಡಲಾಗಿದೆಯೇ ?

ಆ) ಹಾಗಿದ್ದಲ್ಲಿ ಕರಕುಶಲ ಕೆಲಸಗಾರರು ತಮ್ಮ ಪೂರೈಕೆಯನ್ನು ನೀಗಿಸಿಕೊಳ್ಳುವ ಸ್ಥಳಗಳು ಯಾವುವು ? ಹಾಗೂ ಯಾವ ವರ್ಗದ ಕರಕುಶಲ ಕೆಲಸಗಾರರು ಈ ಸವಲತ್ತನ್ನು ಉಪಯೋಗಿಸಿ ಕೊಳ್ಳಬಹುದು ?

ಶ್ರೀ ಬಿ. ಎ. ಜೀವಿಜಯ (ಅರಣ್ಯ ರಾಜ್ಯ ಸಚಿವರು).—

ಆ) ಇಲ್ಲ. ಮೈಸೂರಿನಲ್ಲಿರುವ ಕರಕುಶಲ ಕೆಲಸಗಾರರಿಗೆ ನೇರವಾಗಿ ತೇಗ ಮತ್ತು ಬೀಟೆ ಯನ್ನು ಸರಬರಾಜು ಮಾಡುತ್ತಿಲ್ಲ. ಹಾಗೂ ಶ್ರೀಗಂಧ ಮತ್ತು ದಂತವನ್ನು ಕರ್ನಾಟಕ ರಾಜ್ಯ ಕರ ಕುಶಲ ಕೈಗಾರಿಕಾ ಅಭಿವೃದ್ಧಿನಿಗಮದ ಮೂಲಕ ಸರಬರಾಜು ಮಾಡಲಾಗುತ್ತಿದೆ.

ಆ) ಕರಕುಶಲ ಕೆಲಸಗಾರರು ಸ್ಥಳೀಯ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದ ಕಛೇರಿಯಿಂದ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಬಹುದು.

SMT. MUKTHAR UNNISA.— Sir, Mysore is the core of handicrafts manufacturing sector. There are thousands of small artisans working in Mysore city. In my opinion, teakwood, ivory, sandal wood are very important raw materials for handicrafts. I learn a few business men who are having permits for certain quota - may be it is registered in Handicrafts Development Corporation,-purchase in bulk and then they distribute in retail rate to the small artisans. They are not having any direct permit to purchase and to manufacture. Actually, the small artisans are only the soul of hnndicrafts and beautiful sandal work. They are engaged the whole day and are working very hard. But, they have to purchase from the middlemen, who are registered in the Handicrafts Development Corporation. My humble request to the Government is that they should give the permit just like the ration card, according to the capacity, according to the work, and according to the category, i. e., sandal-wood work and other works. Teak wood and Rose-Wood are very important to manufacture elephants. They are exporting to Japan. Will you help these small artisans who are working hard and on account of them our country is having good popularity, and fame in arts and crafts, about whlch we are very proud of ? I would like to get an assurance from our Hon. Minister.